
# ದಹನ



■ ಹೂವಿನಹಳ್ಳಿ ನಾಗರಾಜ

ವಿಶಾಲನನ್ನು ಎಲ್ಲರೂ ಬೆನ್ನ ಹಿಂದೆ 'ಅಮ್ಮಾವ್ರ ಗಂಡ', 'ಹೆಂಡತಿ ಗುಲಾಮ' ಎಂದೆಲ್ಲ ಹಂಗಿಸುತ್ತಿದ್ದರು. ಹೊರಗಿನವರಷ್ಟೇ ಅಲ್ಲ, ಬಂಧುಗಳು, ಮಿತ್ರರು ಈ ರೀತಿ ಹೀಯಾಳಿಸುವುದು ಅವನ ಕಿವಿಗೆ ಬಿದ್ದಿತ್ತು. ಇದರಿಂದ ಅವನು ಒಳಗೊಳಗೆ ನೋವು ಅನುಭವಿಸುತ್ತ ಕೊರಗುತ್ತಿದ್ದ. ಒಮ್ಮೊಮ್ಮೆ ಅವನಿಗೆ ರೇಜಿಗೆಯಾಗಿ 'ಹೌದು, ನಾನು ಹೆಂಡತಿಯ ಗುಲಾಮನೇ, ಏನೀಗ?' ಎಂದು ಎಲ್ಲರಿಗೂ ಕೇಳುವಂತೆ ಚೀರಿ ಹೇಳಬೇಕು ಅನಿಸುತ್ತಿತ್ತು.

ಆದರೂ ಮನಸ್ಸಿಗೆ ಸಮಾಧಾನ ತಂದುಕೊಂಡು ಕಂಡವರಾಡುವ ಮಾತುಗಳಿಗೆ ತಾನೇಕೆ ಕಿವಿಗೊಡಬೇಕು ಎಂದು ಯೋಚಿಸುತ್ತಿದ್ದ. ತಾನು ವೈಶಾಲಿಯೊಂದಿಗೆ ಸುಖವಾಗಿರುವುದನ್ನು, ತಾವಿಬ್ಬರೂ ಅನ್ಯೋನ್ಯವಾಗಿ ಬಾಳುತ್ತಿರುವುದನ್ನು ಸಹಿಸದ, ತಮ್ಮ ಹೆಂಡತಿಯೊಂದಿಗೆ ಸುಖವಾಗಿ ಬಾಳಲಾಗದ ಅತೃಪ್ತರು ಆಡುವ ಮಾತಿಗೆ ಕಿವಿಗೊಟ್ಟು ನೆಮ್ಮದಿಯನ್ನೇಕೆ ಹಾಳುಮಾಡಿಕೊಳ್ಳಬೇಕು? ಯಾರು ಏನಾದರೂ ಅಂದುಕೊಳ್ಳಲಿ, ಈ ಸಮಾಜ ಹೇಗಿದ್ದರೂ ಒಂದು ಮಾತು ಅನ್ನುತ್ತದೆ. ಹೆಂಡತಿಯೇನು ಗುಲಾಮಳೇ, ಅವಳ ಮೇಲೆ ಅಧಿಕಾರ ಚಲಾಯಿಸಲು? ಅವಳೂ ನಮ್ಮಂತೆಯೇ ಮನುಷ್ಯಳು. ಅವಳಿಗೂ ಆಸೆಗಳಿವೆ, ಕನಸುಗಳಿವೆ, ಬಯಕೆಗಳಿವೆ, ಕೋಪ–ತಾಪಗಳಿವೆ, ನೋವು–ಸಂಕಟಗಳಿವೆ. ಎಲ್ಲಕ್ಕೂ ಮಿಗಿಲಾಗಿ ಅವಳಿಗೂ ಒಂದು ಮನಸ್ಸಿದೆ. ಅವಳೊಂದಿಗೆ ಅರಿತು, ಬೆರೆತು ಸುಖವಾಗಿ ಬಾಳಿದರೆ ಇವರಿಗೇಕೆ ಇಷ್ಟೆಲ್ಲ ಹೊಟ್ಟೆಯುರಿ? ನಾವೂ ಅವರಿವರಂತೆ ನಿತ್ಯ ಕಚ್ಚಾಡುತ್ತ, ಕಾದಾಡುತ್ತ ನೆಮ್ಮದಿ ಕಳೆದುಕೊಂಡು, ಅತ್ತ ಬದುಕಲೂ ಆಗದೆ, ಇತ್ತ ಸಾಯಲೂ ಆಗದೆ ತಲೆ ಕೆಡಿಸಿಕೊಂಡು ಕುಡಿತಕ್ಕೋ ಮತ್ತೊಂದಕ್ಕೋ ದಾಸರಾಗಿ ಬಾಳುವುದೇ ಇವರಿಗೆ ಚಂದ ಅಂತ ಕಾಣುತ್ತೆ. 'ಅರಿತು ಬಾಳು' ಎಂದು ಹಿರಿಯರು ಹೇಳಿದ ಮಾತನ್ನು 'ಮರೆತು ಬಾಳು'ವುದರಲ್ಲೇ ಇವರಿಗೆ ಹಿತವಿದ್ದಂತೆ ಕಾಣುತ್ತದೆ. ಯಾರು ಏನು ಬೇಕಾದರೂ ಅಂದುಕೊಳ್ಳಲಿ, ಹೊಟ್ಟೆ ಉರಿದುಕೊಳ್ಳಲಿ, ನಾವು ನೆಮ್ಮದಿಯಿಂದ ಇದ್ದೇವೆ, ಅಷ್ಟು ಸಾಕು. ಊರ ಚಿಂತೆ ಮಾಡಿ ಯಾರೋ ಬಡವಾದರಂತೆ ಅನ್ನೋ ಗಾದೇನೇ ಇದೆಯಲ್ಲ ಎಂದು ತನ್ನಷ್ಟಕ್ಕೆ ತಾನು ಸಮಾಧಾನ ಮಾಡಿಕೊಂಡ.

***

ವಿಶಾಲ–ವೈಶಾಲಿಯದು ಆದರ್ಶ ದಾಂಪತ್ಯ. ಹಾಗಂತ ಅವರು ಯಾವುದೋ ಟೀವಿ ಶೋದಲ್ಲಿ ಭಾಗವಹಿಸಿ ಸರ್ಟಿಫಿಕೇಟ್ ಪಡೆದವರಲ್ಲ. ಅವರಿಬ್ಬರ ನಡುವಿನ ಅನ್ಯೋನ್ಯತೆ ಕಂಡು ಅನೇಕರು ಈ ಮಾತನ್ನು ಅಂದಿದ್ದರು. ಜನ ಹೀಗೆ ಅಂದಿದ್ದಕ್ಕೆ ಅವರೇನು ಉಬ್ಬಿಹೋಗಲಿಲ್ಲ. ಇದರಲ್ಲಿ ಅಂಥಾ ವಿಶೇಷವಾದುದ್ದೇನೂ ಇಲ್ಲ ಅನಿಸಿದ್ದರೂ ತಮ್ಮ ದಾಂಪತ್ಯ ಜೀವನದ ಕುರಿತು ಜನರಾಡುತ್ತಿದ್ದ ಒಳ್ಳೆಯ ಮಾತುಗಳನ್ನು ಕೇಳಿ ಖುಷಿಪಟ್ಟಂತೆ, ಸಲ್ಲದ ಮಾತುಗಳನ್ನು ಕೇಳಿ ಅವರಿಗೆ ಬೇಸರವೂ ಆಗಿತ್ತು.

'ವಿಶಾಲ ನೀನು ನಿನ್ನ ಹೆಂಡತಿಯ ಮೇಲೆ ಕೋಪಿಸಿಕೊಂಡಿದ್ದಾಗಲಿ, ಅವಳ ಮೇಲೆ ಕೈ ಮಾಡಿದ್ದಾಗಲಿ ಇಲ್ಲವೇ?' ಎಂದು ಗೆಳೆಯ ವಿನೋದ ಕೇಳಿದ ಪ್ರಶ್ನೆಗೆ ವಿಶಾಲ ಮುಗುಳ್ನಕ್ಕು, 'ಸಂಸಾರ ಅಂದ ಮೇಲೆ ಗಂಡ–ಹೆಂಡತಿ ನಡುವೆ ಜಗಳ ಇಲ್ಲದೇ ಇರುತ್ತದೆಯೇ? ಮದುವೆಯಾಗಿ, ಮಕ್ಕಳಾಗುವವರೆಗೆ ನಾವಿಬ್ಬರೂ ಕಚ್ಚಾಡಿದ್ದೂ,